# ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಕಾರವಾರ

ಅ.ದಾ.ನಂ. 1-2015 ಪಿ.ಡಬ್ಲ್ಯೂಃ 2

ಸಾಕ್ಷಿಯ ಹೆಸರು ಮಹಾಬಳೇಶ್ವರ ನಾಗೇಶ್ ನಾಯ್ಕು
ಕಾರವಾರ

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ **10-02-2020.**

**ಪಾಟಿ ಸವಾಲುಃ ಶ್ರೀ ಎಂ ಎಲ್ ಎನ್ (ಹೆಚ್) ವಕೀಲರಿಂದಃ** 1 ನೇ ಪ್ರತಿವಾದಿ ಪರ

ವಾದಿ ನನ್ನ ಸಹೋದರಿಯ ಗಂಡ ಎಂದರೆ ಸರಿ . ನಾನು ಗೋವಾದ ಪಿ .ಡಬ್ಲು.ಡಿ ವಾಟರ್ ಸಪ್ಲಾಯ್ ಇಲಾಖೆಯಲ್ಲಿ ಕೆಲಸ ಮಾಡಿ 2010 ರಲ್ಲಿ ನಿವೃತ್ತನಾಗಿದ್ದೇನೆ . ನನ್ನ ಕುಟುಂಬದ ಸದಸ್ಯರು ಸಹ ನನ್ನೊಂದಿಗೆ ವಾಸಿಸುತ್ತಿದ್ದರು ಎಂದರೆ ಸರಿ . ನಾನು ಮೂಲತಃ ಬಾಡ ನಂದನಗದ್ದಾದ ನಿವಾಸಿ . ವಾದಿ ಕಾಜುಭಾಗ ಕಾರವಾರದ ನಿವಾಸಿ . ಕಾಜುಭಾಗದಿಂದ ನಂದನಗದ್ದಾ ಸುಮಾರು 3 ಕಿ ಮೀ ಅಂತರದಲ್ಲಿದೆ . ವಾದಿ ದಾವೆ ಏತಕ್ಕಾಗಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿದೆ . ನನ್ನ ಪ್ರಕಾರ ನಾನು ಕರಾರು ಆಗುವ ಸಮಯದಲ್ಲಿ ಹಾಜರು ಇದ್ದು , ಕರಾರು ಪತ್ರಕ್ಕೆ ನನ್ನ ಯಾವುದೇ ಸಹಿ ಇಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರಿದು ನನ್ನ ದೊಡ್ಡ ಅಣ್ಣ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ . ಅವರು ಜೀವಿತ ಇದ್ದಾರೆ . ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ ನುಡಿಯುವ ಸ್ಥಿತಿಯಲ್ಲಿ ಇದ್ದಾರೆ . ನನ್ನ ಪ್ರಕಾರ ನಾವು ಕರಾರಿನ ಮಾತುಕತೆಗೆ ಹೋದಾಗ ವಕೀಲರು ಬರವಣಿಗೆ ಮಾಡಿಕೊಂಡು ಬಂದಿದ್ದರು . ಯವ ವಕೀಲರು ಎಂದು ನನಗೆ ಗೊತ್ತಿಲ್ಲ .

2. ದಿಃ 11-04-1984 ರಂದು ರಜೆ ಇರಲಿಲ್ಲ ಎಂದರೆ ಸರಿ . ನಾನು ರಜೆ ಸಲ್ಲಿಸಿ ನನ್ನ ಪ್ರಕಾರ ಮಾತುಕತೆಯ ಸಮಯದಲ್ಲಿ ಹಾಜರು ಇದ್ದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ನನಗೆ ವಾರದ ರಜೆ ಇದ್ದು ಆ ರಜೆ ದಿನದಂದು ಬಂದಿದ್ದೆ ಎಂದು ನುಡಿಯುತ್ತಾರೆ . ನನ್ನ ಪ್ರಕಾರ ವಕೀಲರು ದಾಖಲಾತಿ ಬರೆದುಕೊಂಡು ಬಂದಿದ್ದು ಯಾರ ಮಾಹಿತಿಯ ಆಧಾರದ ಮೇಲೆ ಬರೆದುಕೊಂಡು ಬಂದಿದ್ದರು ಎಂದು ಗೊತ್ತಿಲ್ಲ . ಮಾತುಕತೆಗೆ ಯಾರು ಯಾರು ಹೋಗಿದ್ದರು ಎಂದರೆ . ನಾನು , ನನ್ನ ಭಾವ ಕಮಲಾಕರ್ ಮೇತ್ರಿ , ಅಣ್ಣ

ಗಜಾನನ ನಾಯ್ಕ ಮತ್ತು ತಮ್ಮ ಅಶೋಕ ನಾಯ್ಕ ಇವರು ಹೋಗಿದ್ದರು . ನನಗೆ ಕರಾರಿಗೆ ಸಹಿ ಹಾಕಲು ಏನಾದರೂ ತೊಂದರೆ ಇತ್ತೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ . ಎಷ್ಟು ಸಲ ಮಾತುಕತೆಗೆ ಹೋಗಿದ್ದೆವು ಎಂದರೆ 4 ರಿಂದ 5 ಬಾರಿ ಎಂದು ನುಡಿಯುತ್ತಾರೆ .ನನ್ನ ಪ್ರಕಾರ 4 ರಿಂದ 5 ಬಾರಿ ಮಾತುಕತೆಗೆ ಹೋದಾಗಲು ಸಹ ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳು ಹಾಜರು ಇದ್ದರು . ನನ್ನ ಪ್ರಕಾರ 1984 ರಲ್ಲಿ 28,000/- , 1987 ರಲ್ಲಿ 22,000/- ರೂ ನೀಡಿದ್ದರು . ನೋಟುಗಳ ಮುಖ ಬೆಲೆ ಹೇಳಬಹುದೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ . ನನ್ನ ಪ್ರಕಾರ 1984 ಹಾಗೂ 1987 ರಲ್ಲಿ ಕಾಗದ ಪತ್ರವನ್ನು ವಕೀಲರೇ ಬರೆದುಕೊಂಡು ಬಂದಿದ್ದರು . ನನ್ನ ಅಥವಾ ನನ್ನ ಸಂಬಂಧಿಕರ ಸಮಕ್ಷಮದಲ್ಲಿ ಯಾವುದೇ ಮಾತುಕತೆ ಅಗಿಲ್ಲ , ಯಾವುದೇ ಹಣದ ವ್ಯವಹಾರ ಆಗಿಲ್ಲ ಮತ್ತು ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ . ನಾನು ದಿಃ 11-04-1984 ಮತ್ತು 01-11-1987 ರಂದು ಯಾವುದೇ ಮಾತುಕತೆಗೆ ಹೋಗಿಲ್ಲ ಎಂದರೆ ಸ ರಿಯಲ್ಲ .

**ಪಾಟೀ ಸವಾಲು ಃ ಶ್ರೀ ಆರ್ ವಿ ಬಿ ವಕೀಲರಿಂದ ಃ 2 ನೇ ಪ್ರತಿವಾದಿ ಪರ**

ನನ್ನ ಪ್ರಕಾರ ನಾನು 5 ಬಾರಿ ಮಾತುಕತೆಗೆ ಹೋಗಿದ್ದು , ನಿಖರವಾಗಿ ದಿನಾಂಕಗಳನ್ನು ಹೇಳಬಹುದೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ . ನನ್ನ ಪ್ರಕಾರ 5 ಬಾರಿಯೂ ವಕೀಲರು ಕರಾರು ಪತ್ರ ಮಾಡಿಕೊಂಡು ಬಂದಿದ್ದರೆ ಎಂದರೆ ಹೌದು ಎಂದು ನುಡಿಯುತ್ತಾರೆ .ವಾದಿಯ ಹೆಂಡತಿ ಎಂದರೆ ನನ್ನ ಅಕ್ಕನೊಂದಿಗೆ ನಾನು ನ್ಯಾಯಲಯಕ್ಕೆ ಬಂದಿದ್ದೇನೆ ಎಂದರೆ ಸರಿ . ನನ್ನ ಪ್ರಮಾಣ ಪತ್ರವನ್ನು ನನ್ನ ಅಕ್ಕ ಹಾಗೂ ಅವರ ವಕೀಲರು ಸೇರಿ ಮಾತುಕತೆ ಮಾಡಿ ತಯಾರಿಸಿದರು ಎಂದರೆ ಸರಿ. ವಾದಿ ನನ್ನ ಭಾವ ಆಗಿದ್ದರಿಂದ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ರಾಮನಾಥ ಕಮಲಾಕರ್ ಮೇತ್ರಿ ಪಿ ಡಬ್ಲ್ಯು-3 ಇತ ನನ್ನ ಅಕ್ಕನ ಮಗ .

(2 ನೇ ಪ್ರತಿವಾದಿ ಪರ ವಕೀಲರ 1 ನೇ ಪ್ರತಿವಾದಿ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು)

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)**

**ಓ. ಹೇ.ಕೇ. ಸರಿ ಇದೆ.**

ಪ್ರ.ಸಿವಿಲ್ ಜಡ್ಜ, ಕಾರವಾರ